ರಾಮ, ಕೃಷ್ಣ, ಅಲ್ಲಾ ಮುಂತಾದವರನ್ನು ತಮ್ಮ ಅಗತ್ಯಕ್ಕೆ ತಕ್ಕಂತೆ ಸಹಜವಾಗಿ ಬಳಸಿಕೊಂಡರು. ನನ್ನ ಮಟ್ಟಿಗೆ, ಉಪನಿಷತ್ತುಗಳಲ್ಲಿ ಬರುವ 'ಬ್ರಹ್ಮ'ದ ಪರಿಕಲ್ಪನೆಯೂ ಈ ತಿಳಿಯಲಾಗದ, ಹೆಸರಿಸಲಾಗದ ರಹಸ್ಯವಲ್ಲದೆ ಬೇರೇನೂ ಅಲ್ಲ. ಈ ಸಂಗತಿಯನ್ನು ಕೇನೋಪನಿಷತ್ತಿನಲ್ಲಿ ಬರುವ ಈ ಶ್ಲೋಕವು ಬಹಳ ಚೆನ್ನಾಗಿ ವಿವರಿಸುತ್ತದೆ: ನ ತತ್ರ ಚಕ್ಷುರ್ ಗಚ್ಛತಿ, ನ ವಾಗಚ್ಛತಿ, ನ ಮನಃ ಇತ್ಯಾದಿ. (ಆ ನೆಲೆಗೆ ಕಣ್ಣು ತಲುಪಲಾರದು, ಮಾತುಗಳಿಂದ ಅದನ್ನು ವಿವರಿಸಲು ಸಾಧ್ಯವಿಲ್ಲ, ಮನಸ್ಸು ಕೂಡ ಅದನ್ನು ಗ್ರಹಿಸಲಾರದು.) ಇಲ್ಲಿ 'ಬ್ರಹ್ಮ'ವನ್ನು ಕಾಣಲಾಗದ, ಸೂತ್ರೀಕರಿಸಲಾಗದ, ವರ್ಣಿಸಲಾಗದ, ಆಲೋಚನೆ ಮತ್ತು ಬುದ್ಧಿಗಳಿಂದ ಆಚೆಗಿರುವ, ಕಲಿಯಲಾಗದ-ಕಲಿಸಲಾರದ ಸಂಗತಿಯೆಂದು ಹೇಳಿದ್ದಾರೆ. ಈ ಬಗೆಯ ಆಧ್ಯಾತ್ಮಿಕತೆಯೊಂದಿಗೆ ನಾನು ಸಮಾಧಾನಿಯಾಗಿ ಇರಬಲ್ಲೆ.

**◆ ಇಂದಿನ ರಾಜಕೀಯ ಸ್ಥಿತ್ಯಂತರಗಳು, ಧರ್ಮದ ಕುರಿತಾದ ಅತಿರೇಕ, ಮತಾಂಧತೆ, ಆತ್ಮಸಾಕ್ಷಿ ಸತ್ತುಹೋದ ಮನುಷ್ಯ ಜೀವನವನ್ನು ನೋಡಿದರೆ, ಆರೋಗ್ಯಕರ ಬದುಕಿನಲ್ಲಿ ನಂಬಿಕೆಯನ್ನು ಇಟ್ಟುಕೊಂಡು ಬದುಕುವುದೇ ಕಷ್ಟ ಅನ್ನಿಸುತ್ತದೆ... ಈ ಸ್ಥಿತಿ ನಿಜಕ್ಕೂ ಆಘಾತಕಾರಿ. ಇಂತಹ ಹೊತ್ತಿನಲ್ಲಿ ಕವಿತೆಯ ದಾರಿಗಳೇನು?**

ಈ ಧರ್ಮಾಂಧತೆ ಮತ್ತು ಪಂಥಾಭಿಮಾನದಿಂದ ಕಾವ್ಯವು ನಮ್ಮನ್ನು ಬದುಕಿಸುತ್ತದೆ ಮತ್ತು ಕಾಪಾಡುತ್ತದೆ, ಯಾಕೆಂದರೆ ಕಾವ್ಯವು ಮನುಷ್ಯಕುಲದ ತಾಯಿನುಡಿ. ಯಾವುದೇ ಭಾಷೆಯಲ್ಲಿ ಬರೆಯುವ, ಯಾವುದೇ ಕಾಲಘಟ್ಟದಲ್ಲಿ ಬದುಕಿರುವ ಕವಿಗಳು ಒಂದೇ ಕುಲಕ್ಕೆ ಸೇರಿದವರು. ಇದರ ಕುರಿತು ನನ್ನದೊಂದು ಕವಿತೆಯಿದೆ:

## ನನ್ನ ಬುಡಕಟ್ಟು

ಮೆಕ್ಸಿಕೋ ದೇಶದ ಅಜ್ಟೆಕ್ ಬುಡಕಟ್ಟಿನವರು
ಚಿಟ್ಟೆಗಳು ಸತ್ತವರ ಆತ್ಮಗಳೆಂದು ನಂಬುತ್ತಾರೆ.
ಯುದ್ಧದಲ್ಲಿ ಕೊಲ್ಲಲ್ಪಟ್ಟ ಯುವಕರಿರಬಹುದು
ಹೆರಿಗೆಯಲ್ಲಿ ಪ್ರಾಣ ಬಿಟ್ಟ ತಾಯಂದಿರಿರಬಹುದು.

ನನ್ನ ಬುಡಕಟ್ಟಿನವರು,
ದೇಶಗಳ ನಡುವಿನ ಗಡಿಗೆರೆಗಳನ್ನು
ಗಡಿಜಗಳಗಳಲ್ಲಿ ಸತ್ತ ಯುವಕರ ರಕ್ತದಿಂದ
ಮತ್ತು ಅವರ ತಾಯಂದಿರ ಕಣ್ಣೀರಿನಿಂದ
ಎಳೆದಿರುವುದೆಂದು ನಂಬುತ್ತಾರೆ.
ಅವರು ದೇವರಿಗೆ ಜಾತಿ, ಧರ್ಮ, ಲಿಂಗ,
ಜನಾಂಗ
ಇಲ್ಲವೆಂದೂ ನಂಬುತ್ತಾರೆ.

ನಮ್ಮ ದೇಶದ ಗಡಿ ಆಕಾಶ
ಅದನ್ನು ಆಳುವವರೂ ಇಲ್ಲ, ಪ್ರಜೆಗಳೂ ಇಲ್ಲ.
ಅಲ್ಲಿ ಎಲ್ಲರಿಗೂ ಎಲ್ಲ ಭಾಷೆಗಳೂ ಗೊತ್ತು.
ಕಾಗೆಗಳು ಮಲಯಾಳಂ ಮಾತಾಡುವಷ್ಟೇ
ಚೆನ್ನಾಗಿ
ಮರಕುಟಿಗಗಳು ಸ್ಪ್ಯಾನಿಶ್ ಮಾತಾಡುತ್ತವೆ.
ಇಲ್ಲಿ ಯಾರು ಯಾರನ್ನು ಬೇಕಾದರೂ
ಪ್ರೀತಿಸಬಹುದು
ಇಬ್ಬರೂ ಒಪ್ಪಬೇಕು ಅಷ್ಟೆ:
ಹುಲ್ಲು ಹುಳವನ್ನು ಪ್ರೀತಿಸಬಹುದು,
ಗುಬ್ಬಚ್ಚಿ ಬೆಳುದಿಂಗಳನ್ನು ಪ್ರೀತಿಸಬಹುದು
ದೇವತೆಗಳು ಮನುಷ್ಯರನ್ನು ಪ್ರೀತಿಸಬಹುದು
ನೆನಪುಗಳು ಕನಸುಗಳನ್ನು ಪ್ರೀತಿಸಬಹುದು.

ಇಲ್ಲಿ ಎಲ್ಲ ಬಾಗಿಲುಗಳೂ ಎಲ್ಲರಿಗೂ ತೆರೆದಿವೆ
ಬೆಕ್ಕುಗಳಿಗೆ, ಮನುಷ್ಯರಿಗೆ ಮತ್ತು
ಧೂಮಕೇತುಗಳಿಗೆ.
ಇಲ್ಲಿ ಭೂತ, ಭವಿಷ್ಯ, ವರ್ತಮಾನಗಳ ನಡುವೆ
ಗಡಿಗೆರೆಗಳಿಲ್ಲ.
ಅವುಗಳ ಕಾವಲು ಕಾಯಲು ವ್ಯಾಕರಣ
ನಿಯಮಗಳ ಸೈನ್ಯವೂ ಇಲ್ಲ.

ನಮ್ಮಲ್ಲಿ ಒಬ್ಬರು ತೀರಿಕೊಂಡಾಗ ವಿಧಿಕ್ರಿಯೆಗಳು
ಬಹಳ ಸರಳ
ಬುಡಕಟ್ಟಿನಲ್ಲಿ ಇನ್ನೊಬ್ಬರು ಹುಟ್ಟುವ ತನಕ
ಮಾಗಿ—ಎಲೆಗಳನ್ನು ಉದುರಿಸಿ ಉದುರಿಸಿ
ಬಡವಾಗುತ್ತೇವೆ